# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ಮೇ ೧೯, ೨೦೨೩ರ ಶುಕ್ರವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೯ನೇ ತುರ್ತು ಸಭೆಯ ನಡವಳಿಗಳು

೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ : ಅಧ್ಯಕ್ಷರು
೦೨. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ : ಸದಸ್ಯರು
೦೩. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೦೪. ಡಾ. ಕೆ.ಸಿ. ಶಿವಾರೆಡ್ಡಿ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ : ಸದಸ್ಯರು
೦೫. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ : ಸದಸ್ಯರು
೦೬. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ : ವಿಶೇಷ ಆಹ್ವಾನಿತರು

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

೦೭. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ : ಪದನಿಮಿತ್ತ ಕಾರ್ಯದರ್ಶಿ

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು : ಸದಸ್ಯರು
೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು
೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು : ಸದಸ್ಯರು
೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು : ಸದಸ್ಯರು

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೮.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡವಳಿಗಳಿಗೆ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೦೮.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

ದಿನಾಂಕ ೦೮.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿ ೨೧೮.೧೩ರ ನಿರ್ಣಯದಂತೆ ಬೋಧಕೇತರ ಸಿಬ್ಬಂದಿಗಳ ಪದೋನ್ನತಿ ಸಂಬಂಧ ಹಣಕಾಸು ಅಧಿಕಾರಿಗಳು ಮತ್ತು ಉಪಕುಲಸಚಿವರು (ಆ) ಇವರು ಬೋಧಕೇತರ ಸಿಬ್ಬಂದಿಗಳ ೧೯೯೨ರಿಂದ ಮೊದಲ್ಗೊಂಡು ಸೇವಾ ಜೇಷ್ಠತೆಯನ್ನು ಸಿದ್ಧಪಡಿಸಲು ತೀರ್ಮಾನಿಸಲಾಗಿತ್ತು. ವಿಶ್ವವಿದ್ಯಾಲಯದಲ್ಲಿ ಈಗಾಗಲೇ ೨೦೧೫ರಲ್ಲಿ ಸಿದ್ಧಪಡಿಸಲಾದ ಸೇವಾ ಜೇಷ್ಠತೆ ಪಟ್ಟಿಯನ್ನು ಪ್ರಕಟಿಸಿ, ಸದರಿ ಜೇಷ್ಠತಾ ಪಟ್ಟಿಗೆ ಸಿಬ್ಬಂದಿಗಳಿಂದ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶಗಳನ್ನು ನೀಡಿ ಆಕ್ಷೇಪಣೆಗಳು ಸಲ್ಲಿಕೆಯಾದ ನಂತರ ನಿಯಮಾನುಸಾರ ೩೭೧(ಜೆ) ಮತ್ತು ೩೭೧(ಜೆ)ಯೇತರ ಎರಡು ಪ್ರತ್ಯೇಕ ಜೇಷ್ಠತಾ ಪಟ್ಟಿಗಳನ್ನು ಸಿದ್ಧಪಡಿಸಲು ಸಭೆಯು ತೀರ್ಮಾನಿಸಿತು.

**ವಿಷಯ** : ದಿನಾಂಕ ೦೮.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೦೮.೦೫.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೧೮ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಲು ಸಭೆಯು ತೀರ್ಮಾನಿಸಿತು.

೨೧೯.೦೧ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ಶಿಸ್ತುಕ್ರಮ ಜರುಗಿಸುವ ಸಂಬಂಧ ಜಾರಿಯಾಗಿರುವ ನೋಟೀಸ್‌ನ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ಶಿಸ್ತುಕ್ರಮಕ್ಕೆ ಸಂಬಂಧಪಟ್ಟಂತೆ (ನೋಟೀಸ್ ಸಂಖ್ಯೆ: ಇ.ಸಂ. ಇಡಿ ೩೪ ಕೆವಿವಿ ೨೦೨೨ ದಿನಾಂಕ ೦೫.೦೫.೨೦೨೩) ಜಾರಿಯಾಗಿರುವ ನೋಟೀಸಿನ ಕುರಿತು ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದಲ್ಲಿ ೨೦೧೫-೧೬ ಮತ್ತು ೨೦೧೬-೧೭ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಅನುಷ್ಠಾನಗಳಲ್ಲಿ ಲೋಪಗಳಾಗಿವೆ ಎನ್ನಲಾದ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ ಅಧಿಕಾರಿ/ಸಿಬ್ಬಂದಿಗಳು ದಿನಾಂಕ ೧೮.೦೫.೨೦೨೩ರಂದು ಮಾನ್ಯ ಕುಲಪತಿಗಳಿಗೆ ನೀಡಿರುವ ಮನವಿಯಲ್ಲಿನ ಅಂಶಗಳನ್ನು ಉಲ್ಲೇಖಿಸಿ ಸರ್ಕಾರಕ್ಕೆ ಮರು ಪರಿಶೀಲನೆಗೆ ಕೋರಲು ಮನವಿ ಸಲ್ಲಿಸುವಂತೆಯೂ ಸದರಿ ಮನವಿಗೆ ಸರ್ಕಾರದಿಂದ ಬರಬಹುದಾದ ಉತ್ತರಕ್ಕೆ ಅನುಗುಣವಾಗಿ ಮುಂದಿನ ಕ್ರಮಕೈಗೊಳ್ಳುವಂತೆಯೂ ಸಭೆಯು ತೀರ್ಮಾನಿಸಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು